**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆಃ- 1/2026**

**ಪ್ರಾಸಾಃ- 1 ಚಾಸಾಃ- 1**

| | | |
|---|---|---|
| ಸಾಕ್ಷಿಯ ಹೆಸರು | : | ಅವಿನಾಶ್ ನಾಯಕ್ |
| ತಂದೆಯ ಹೆಸರು | : | ನಾಗು ನಾಯಕ್ |
| ವಯಸ್ಸು | : | 24 ವರ್ಷ |
| ವೃತ್ತಿ | : | ಫ್ಯಾಕ್ಟರಿಯಲ್ಲಿ ಕೆಲಸ |
| ವಾಸಸ್ಥಳ | : | ಬೆಳಗಲ್ ತಾಂಡಾ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 10.3.2026**
**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ಆರೋಪಿ ನನ್ನ ತಂದೆ. ಮೃತ ಸೀತಾಬಾಯಿ ನನ್ನ ತಾಯಿ. ಚಾಸಾ 13 ನನ್ನ ತಂಗಿ. ನನಗೆ ಚಾಸಾ 12, 14 ರಿಂದ 18 ರವರ ಪರಿಚಯ ಇದೆ. ಈಗ 5 ತಿಂಗಳ ಹಿಂದೆ ನನ್ನ ತಾಯಿ ಮೃತರಾಗಿದ್ದರು. ನನ್ನ ತಾಯಿ ಹೇಗೆ ಮತ್ತು ಯಾವ ಕಾರಣದಿಂದಾಗಿ ಮರಣ ಹೊಂದಿದ್ದಳು ಎಂದು ನನಗೆ ಗೊತ್ತಿಲ್ಲ. ನಾನು ಆ ಸಮಯದಲ್ಲಿ ಕರ್ತವ್ಯದಲ್ಲಿ ಇದ್ದೆ. ನನ್ನ ತಂದೆ ನನ್ನ ತಾಯಿಗೆ ಹಾರೆಯಿಂದ ಹಲ್ಲೆ ಮಾಡಿ ಕೊಲೆ ಮಾಡಿಲ್ಲ. ನನ್ನ ತಂದೆ ನನ್ನ ತಂಗಿಗೆ ಹಾರೆ ಮತ್ತು ಕೊಡಲಿಯಿಂದ ಹೊಡೆದು ಗಾಯಗೊಳಿಸಿಲ್ಲ. ಈ ಬಗ್ಗೆ ನಾನು ಆರೋಪಿಯ ವಿರುದ್ಧ ಪೋಲೀಸರಿಗೆ ಯಾವುದೇ ದೂರನ್ನು ಕೊಟ್ಟಿಲ್ಲ. ನನ್ನ ತಾಯಿಯ ಸಾವಿನ ಬಗ್ಗೆ ನನ್ನ ಸಹಿ ಬೇಕು ಎಂದು ಹೇಳಿ ಪೋಲೀಸರು ನನ್ನ ಸಹಿಯನ್ನು ಪಡೆದುಕೊಂಡಿದ್ದರು. ನಾನು ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯು ದೂರು ಆಗಿದ್ದು ಅದನ್ನು ನಿಪಿ-1 ಎಂದು ಹಾಗೂ ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನನಗೆ ಈ ಪ್ರಕರಣದಲ್ಲಿ ಹೆಚ್ಚಿನ ಮಾಹಿತಿ ಇಲ್ಲ. ನಾನು ಪೋಲೀಸರ ಮುಂದೆ ಯಾವುದೇ ಮರು ಹೇಳಿಕೆಯನ್ನು ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮತ್ತು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದರಿಂದ ಅದನ್ನು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರಿಗೆ ಅನುಮತಿ ನೀಡಲಾಯಿತು).**

**<u>ಪಾಟೀ ಸವಾಲುಃ ಅಭಿಯೋಜಕರವರಿಂದಃ</u>**

ಆರೋಪಿಯು ನನ್ನ ತಾಯಿಗೆ ಅವಳ ತವರು ಮನೆಯಿಂದ ಒಂದು ಎಕರೆ ಜಮೀನನ್ನು ತನ್ನ ಹೆಸರಿಗೆ ಮಾಡಿಸುವಂತೆ ಒತ್ತಾಯ ಮಾಡುತ್ತಿದ್ದ ಎಂದರೆ ಸರಿಯಲ್ಲ. ನನ್ನ ತಾಯಿಯು ತವರು ಮನೆಯಿಂದ ಯಾವುದೇ ಆಸ್ತಿ ತಂದು ಕೊಡದೇ ಇದ್ದುದರಿಂದ ಆರೋಪಿಯು ನನ್ನ ತಾಯಿಯ ತಮ್ಮಂದಿರ ಮೇಲೆ ಸಿಟ್ಟು ಇಟ್ಟುಕೊಂಡಿದ್ದ ಮತ್ತು ಅದೇ ಸಿಟ್ಟಿನಿಂದ ನನ್ನ ತಾಯಿಗೆ ತವರು ಮನೆಗೆ ಹೋಗಬೇಡ ಎಂದು ಹೇಳುತ್ತಿದ್ದ ಎಂದರೆ ಸರಿಯಲ್ಲ. ನನ್ನ ತಾಯಿಯ ತಮ್ಮ ರಾಮು ನಾಯಕ್ ಅನಾರೋಗ್ಯದಿಂದ ಮೃತ ಪಟ್ಟಿದ್ದರಿಂದ ನನ್ನ ತಾಯಿ ಆತನನ್ನು ನೋಡಲು ಹೋಗುವ ಸಮಯದಲ್ಲಿ ನನ್ನ ತಂದೆ ನನ್ನ ತಾಯಿಗೆ ಕಾರ್ಯಕ್ರಮಕ್ಕೆ ಹೋಗಬೇಡ ಎಂದು ಹೇಳಿದ್ದರೂ ಸಹ ನನ್ನ ತಾಯಿ ಅವಳ ತಮ್ಮನ ಅಂತ್ಯ ಸಂಸ್ಕಾರಕ್ಕೆ ನನ್ನ ಮತ್ತು ಚಾಸಾ 13 ರವರ ಜೊತೆ ಹೋಗಿದ್ದಳು ಎಂದರೆ ಸರಿಯಲ್ಲ. ನನ್ನ ತಾಯಿ ಮನೆಗೆ ಬಂದಾಗ ಆರೋಪಿಯು ಅವಳಿಗೆ ಮತ್ತು ನಮಗೆ ನಾನು ಹೋಗಬೇಡ ಎಂದರೂ ಸಹ ನೀವು ರಾಮಾ ನಾಯಕ್ ನ ಮರಣ ಕಾರ್ಯಕ್ರಮಕ್ಕೆ ಏಕೆ ಹೋಗಿದ್ದೀರಿ ಎಂದು ನನ್ನ ತಾಯಿಯ ಜೊತೆ ಜಗಳ ಆಡಿದ್ದ ಎಂದರೆ ಸರಿಯಲ್ಲ. ದಿಃ 2-5-2025 ರಂದು ರಾಮಾ ನಾಯಕ್ ನ 11 ದಿವಸದ ಕಾರ್ಯಕ್ರಮಕ್ಕೆ ನನ್ನ ತಾಯಿ ನನ್ನನ್ನು ಮತ್ತು ಚಾಸಾ 13 ರವರನ್ನು ಕರೆದುಕೊಂಡು ಹೋಗಿದ್ದಳು ಎಂದರೆ ಸರಿಯಲ್ಲ. ಆದ್ದರಿಂದ ಆರೋಪಿಗೆ ಸಿಟ್ಟು ಬಂದು ನನ್ನ ತಾಯಿಗೆ ನೀನು ನನಗೆ ಮರ್ಯಾದೆ ಕೊಡದೇ ನನ್ನ ಮಾತಿಗೆ ಬೆಲೆ ಕೊಡದೇ ಆ ಕಾರ್ಯಕ್ರಮಕ್ಕೆ ಹೋಗಿ ಬಂದಿದ್ದಿ ಎಂದು ಜಗಳ ವಾಡಿದ್ದ ಎಂದರೆ ಸರಿಯಲ್ಲ. ನನ್ನ ತಾಯಿ ಆಗ ಎದುರು ಮಾತನಾಡಿದ್ದರಿಂದ ಆಕೆಯ ಮೇಲೆ ನನ್ನ ತಂದೆ ದ್ವೇಷ ಇಟ್ಟುಕೊಂಡಿದ್ದ ಎಂದರೆ ಸರಿಯಲ್ಲ. ಅದೇ ದ್ವೇಷದಿಂದ ಆರೋಪಿ ದಿಃ 3-10-2025 ರಂದು ರಾತ್ರಿ 8-30 ಗಂಟೆಗೆ ನನ್ನ ತಾಯಿಯೊಂದಿಗೆ ಜಗಳ ಆಡಿದ್ದ ಎಂದರೆ ಸರಿಯಲ್ಲ. ಆಗ ಚಾಸಾ 13 ಮಧ್ಯದಲ್ಲಿ ಬಾಯಿ ಹಾಕಿದ್ದರಿಂದ ಆರೋಪಿಯು ಸಿಟ್ಟಿನಿಂದ ನ್ಯಾಯಾಲಯದ

ಮುಂದೆ ನೋಡುತ್ತಿರುವ ಕಬ್ಬಿಣದ ಗಡಾರಿಯಿಂದ ಚಾಸಾ 13 ರವರಿಗೆ ಹೊಡೆಯಲು ಹೋಗಿದ್ದ ಎಂದರೆ ಸರಿಯಲ್ಲ. ಆಗ ನನ್ನ ತಾಯಿ ಬಿಡಿಸಲು ಅಡ್ಡ ಬಂದಾಗ ಆರೋಪಿಯು ನನ್ನ ತಾಯಿಯನ್ನು ಕೊಲೆ ಮಾಡುವ ಉದ್ದೇಶದಿಂದ ಸದರಿ ಕಬ್ಬಿಣದ ಗಡಾರಿಯಿಂದ ನನ್ನ ತಾಯಿಯ ತಲೆಯ ಮೇಲೆ ಹೊಡೆದು ಭಾರಿ ರಕ್ತ ಗಾಯ ಮಾಡಿದ್ದ ಎಂದರೆ ಸರಿಯಲ್ಲ. ಚಾಸಾ 13 ಕಿರುಚಾಡಿಕೊಂಡಾಗ ಶಬ್ದ ಕೇಳಿ ಚಾಸಾ 14, 15 ಮತ್ತು 16 ರವರು ಸ್ಥಳಕ್ಕೆ ಬಂದರು ಮತ್ತು ಚಾಸಾ 14 ಆರೋಪಿಯ ಕೈಯಲ್ಲಿದ್ದ ಕಬ್ಬಿಣದ ಗಡಾರಿಯನ್ನು ಕಸಿದುಕೊಂಡು ಮನೆಯ ಪಕ್ಕದಲ್ಲಿ ಬೀಸಾಡಿದ್ದನು ಎಂದರೆ ಸರಿಯಲ್ಲ. ಆಗ ಆರೋಪಿಯುಮನೆಯಲ್ಲಿದ್ದ ಕೊಡಲಿಯನ್ನು ತೆಗೆದುಕೊಂಡು ಚಾಸಾ 13 ರವರ ತಲೆಗೆ ಕೊಡಲಿ ಕಾವಿನಿಂದ ಹೊಡೆದು ಗಾಯಪಡಿಸಿದ್ದನು ಎಂದರೆ ಸರಿಯಲ್ಲ. ಚಾಸಾ 14 ರಿಂದ 16 ಜಗಳ ಬಿಡಿಸಲು ಬಂದಾಗ ಆರೋಪಿಯು ಸದರಿ ಕೊಡಲಿಯನ್ನು ಅವರಿಗೆ ತೋರಿಸಿ ಹೊಡೆಯುವುದಾಗಿ ಬೆದರಿಕೆ ಹಾಕಿದ್ದ ಎಂದರೆ ಸರಿಯಲ್ಲ. ನಂತರ ಕೊಡಲಿಯೊಂದಿಗೆ ಮನೆಯ ಹೊರಗೆ ಸ್ವಲ್ಪ ದೂರಕ್ಕೆ ಹೋಗಿ ಕೊಡಲಿಯನ್ನು ಬೀಸಾಡಿ ಆರೋಪಿಯು ಪರಾರಿಯಾಗಿದ್ದ ಎಂದರೆ ಸರಿಯಲ್ಲ. ನಂತರ ಗಾಯಾಳು ಸೀತಾ ಬಾಯಿ ಹಾಗೂ ಚಾಸಾ 13 ರವರನ್ನು ಚಾಸಾ 14, 18 ಮತ್ತು 19 ರವರು ಆಟೋದಲ್ಲಿ ಹಾಕಿಕೊಂಡು ಬಿ ಎಂ ಸಿ ಆರ್ ಸಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ವೈದ್ಯರು ನನ್ನ ತಾಯಿಯನ್ನು ಪರೀಕ್ಷಿಸಿ ಮೃತ ಪಟ್ಟಿರುತ್ತಾಳೆ ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ.

ಈ ಎಲ್ಲಾ ಸಂಗತಿಗಳ ಬಗ್ಗೆ ದಿಃ 4-10-2025 ರಂದು ಪೋಲೀಸರ ಮುಂದೆ ಮದ್ಯಾಹ್ನ 2-00 ಗಂಟೆಗೆ ನಿಪಿ-1 ರಂತೆ ಆರೋಪಿಯ ವಿರುದ್ಧ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರ ಸಂಗತಿ ತಿಳಿದುಕೊಂಡು ನಾನು ಸಹಿ ಮಾಡಿದ್ದೆ ಎಂದರೆ ಸರಿಯಲ್ಲ.

ದಿಃ 4-10-2025 ರಂದೇ ನಾನು ಪೋಲೀಸರ ಮುಂದೆ ನನಗೆ ಈಗ ಓದಿ ಹೇಳಿದಂತೆ " ನಾನು ಮೇಲ್ಕಂಡ ವಿಳಾಸದಲ್ಲಿ --- ಹೇಳಿಕೆಯಲ್ಲಿ ನೀಡಿರುತ್ತೇನೆ " ಎಂದು ಮರು ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿಗೆ ಓದಿ ಹೇಳಿದ ಮರು ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ನಿಪಿ-1 ರಂತೆ ದೂರನ್ನು ಕೊಟ್ಟಿದ್ದರೂ ಸಹ ಮತ್ತು ನಿಪಿ-2 ರಂತೆ ಮರು ಹೇಳಿಕೆಯನ್ನು

ನೀಡಿದ್ದರೂ ಸಹ ಮತ್ತು ನನಗೆ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿಯು ನನ್ನ ತಂದೆಯಾಗಿರುವುದರಿಂದ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಪಾಟೀ ಸವಾಲು ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆ:- 1/2026**

**ಪ್ರಾಸಾಃ- 2 ಚಾಸಾಃ- 12**

| | | |
|---|---|---|
| ಸಾಕ್ಷಿಯ ಹೆಸರು | : | ಶಿವು ನಾಯಕ್ |
| ತಂದೆಯ ಹೆಸರು | : | ಪರಶು ನಾಯಕ್ |
| ವಯಸ್ಸು | : | 37 ವರ್ಷ |
| ವೃತ್ತಿ | : | ಚಾಲಕ |
| ವಾಸಸ್ಥಳ | : | ಬೆಳಗಲ್ ತಾಂಡಾ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 10.3.2026**
**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ಆರೋಪಿ ನನ್ನ ಅಣ್ಣನಾಗಬೇಕು. ಮೃತ ಸೀತಾಬಾಯಿ ನನ್ನ ಅತ್ತಿಗೆಯಾಬೇಕು. ಚಾಸಾ 1 ಮತ್ತು 13 ರವರು ನನ್ನ ಅಣ್ಣನ ಮಕ್ಕಳಾಗಬೇಕು. ನನಗೆ ಚಾಸಾ 12, 14 ರಿಂದ 18 ರವರ ಪರಿಚಯ ಇದೆ. ಈಗ 5 ತಿಂಗಳ ಹಿಂದೆ ನನ್ನ ಅತ್ತಿಗೆ ಮೃತರಾಗಿದ್ದರು. ನನ್ನ ಅತ್ತಿಗೆ ಹೇಗೆ ಮತ್ತು ಯಾವ ಕಾರಣದಿಂದಾಗಿ ಮರಣ ಹೊಂದಿದ್ದಳು ಎಂದು ನನಗೆ ಗೊತ್ತಿಲ್ಲ. ನನ್ನ ಅಣ್ಣ ನನ್ನ ಅತ್ತಿಗೆಗೆ ಹಾರೆಯಿಂದ ಹಲ್ಲೆ ಮಾಡಿ ಕೊಲೆ ಮಾಡಿಲ್ಲ. ನನ್ನ ಅಣ್ಣ ಚಾಸಾ 13 ರವರಿಗೆ ಹಾರೆ ಮತ್ತು ಕೊಡಲಿಯಿಂದ ಹೊಡೆದು ಗಾಯಗೊಳಿಸಿಲ್ಲ. ಈ ಬಗ್ಗೆ ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ನಾನು ಮೃತಳ ಶವ ಪಂಚನಾಮೆ ಸಮಯದಲ್ಲಿ ಹಾಜರು ಇರಲಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮತ್ತು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದರಿಂದ ಅದನ್ನು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರಿಗೆ ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ಅಭಿಯೋಜಕರವರಿಂದಃ**

ಆರೋಪಿಯು ತನ್ನ ಹೆಂಡತಿಗೆ ಅವಳ ತವರು ಮನೆಯಿಂದ ಒಂದು ಎಕರೆ ಜಮೀನನ್ನು ತನ್ನ ಹೆಸರಿಗೆ ಮಾಡಿಸುವಂತೆ ಒತ್ತಾಯ ಮಾಡುತ್ತಿದ್ದ ಎಂದರೆ ಸರಿಯಲ್ಲ. ನನ್ನ ಅತ್ತಿಗೆ ತವರು ಮನೆಯಿಂದ ಯಾವುದೇ ಆಸ್ತಿ ತಂದು ಕೊಡದೇ ಇದ್ದುದರಿಂದ ಆರೋಪಿಯು ಅವಳ ತಮ್ಮಂದಿರ ಮೇಲೆ ಸಿಟ್ಟು ಇಟ್ಟುಕೊಂಡಿದ್ದ ಮತ್ತು ಅದೇ ಸಿಟ್ಟಿನಿಂದ ಅವಳನ್ನು ತವರು ಮನೆಗೆ ಹೋಗಬೇಡ ಎಂದು ಹೇಳುತ್ತಿದ್ದ ಎಂದರೆ ಸರಿಯಲ್ಲ. ನನ್ನ ಅತ್ತಿಗೆಯ ತಮ್ಮ ರಾಮು ನಾಯಕ್ ಅನಾರೋಗ್ಯದಿಂದ ಮೃತ ಪಟ್ಟಿದ್ದರಿಂದ ನನ್ನ ಅತ್ತಿಗೆ ಆತನನ್ನು ನೋಡಲು ಹೋಗುವ ಸಮಯದಲ್ಲಿ ಆರೋಪಿಯು ಅವಳಿಗೆ ಕಾರ್ಯಕ್ರಮಕ್ಕೆ ಹೋಗಬೇಡ ಎಂದು ಹೇಳಿದ್ದರೂ ಸಹ ಅಳು ತನ್ನ ತಮ್ಮನ ಅಂತ್ಯ ಸಂಸ್ಕಾರಕ್ಕೆ ಚಾಸಾ 1 ಮತ್ತು 13 ರವರ ಜೊತೆ ಹೋಗಿದ್ದಳು ಎಂದರೆ ಸರಿಯಲ್ಲ. ನನ್ನ ಅತ್ತಿಗೆ ಮನೆಗೆ ಬಂದಾಗ ಆರೋಪಿಯು ಅವಳಿಗೆ ಮತ್ತು ಚಾಸಾ 1 ಮತ್ತು 13 ರವರಿಗೆ ನಾನು ಹೋಗಬೇಡ ಎಂದರೂ ಸಹ ನೀವು ರಾಮಾ ನಾಯಕ್ ನ ಮರಣ ಕಾರ್ಯಕ್ರಮಕ್ಕೆ ಏಕೆ ಹೋಗಿದ್ದೀರಿ ಎಂದು ನನ್ನ ಅತ್ತಿಗೆ ಜೊತೆ ಜಗಳ ಆಡಿದ್ದ ಎಂದರೆ ಸರಿಯಲ್ಲ. ದಿಃ 2-5-2025 ರಂದು ರಾಮಾ ನಾಯಕ್‌ನ 11 ದಿವಸದ ಕಾರ್ಯಕ್ರಮಕ್ಕೆ ನನ್ನ ಅತ್ತಿಗೆ ತನ್ನ ಮಕ್ಕಳನ್ನು ಕರೆದುಕೊಂಡು ಹೋಗಿದ್ದಳು ಎಂದರೆ ಸರಿಯಲ್ಲ. ಆದ್ದರಿಂದ ಆರೋಪಿಗೆ ಸಿಟ್ಟು ಬಂದು ಅವಳಿಗೆ ನೀನು ನನಗೆ ಮರ್ಯಾದೆ ಕೊಡದೇ ನನ್ನ ಮಾತಿಗೆ ಬೆಲೆ ಕೊಡದೇ ಆ ಕಾರ್ಯಕ್ರಮಕ್ಕೆ ಹೋಗಿ ಬಂದಿದ್ದಿ ಎಂದು ಜಗಳ ವಾಡಿದ್ದ ಎಂದರೆ ಸರಿಯಲ್ಲ. ನನ್ನ ಅತ್ತಿಗೆ ಆಗ ಎದುರು ಮಾತನಾಡಿದ್ದರಿಂದ ಆಕೆಯ ಮೇಲೆ ನನ್ನ ಅಣ್ಣ ದ್ವೇಷ ಇಟ್ಟುಕೊಂಡಿದ್ದ ಎಂದರೆ ಸರಿಯಲ್ಲ. ಅದೇ ದ್ವೇಷದಿಂದ ಆರೋಪಿ ದಿಃ 3-10-2025 ರಂದು ರಾತ್ರಿ 8-30 ಗಂಟೆಗೆ ನನ್ನ ಅತ್ತಿಗೆಯೊಂದಿಗೆ ಜಗಳ ಆಡಿದ್ದ ಎಂದರೆ ಸರಿಯಲ್ಲ. ಆಗ ಚಾಸಾ 13 ಮಧ್ಯದಲ್ಲಿ ಬಾಯಿ ಹಾಕಿದ್ದರಿಂದ ಆರೋಪಿಯು ಸಿಟ್ಟಿನಿಂದ ನ್ಯಾಯಲಯದ ಮುಂದೆ ನೋಡುತ್ತಿರುವ ಕಬ್ಬಿಣದ ಗಡಾರಿಯಿಂದ ಚಾಸಾ 13 ರವರಿಗೆ ಹೊಡೆಯಲು ಹೋಗಿದ್ದ ಎಂದರೆ ಸರಿಯಲ್ಲ. ಆಗ ನನ್ನ ಅತ್ತಿಗೆ ಬಿಡಿಸಲು ಅಡ್ಡ ಬಂದಾಗ ಆರೋಪಿಯು ನನ್ನ ಅತ್ತಿಗೆಯನ್ನು ಕೊಲೆ ಮಾಡುವ ಉದ್ದೇಶದಿಂದ ಸದರಿ ಕಬ್ಬಿಣದ ಗಡಾರಿಯಿಂದ ನನ್ನ ಅತ್ತಿಗೆಯ ತಲೆಯ ಮೇಲೆ ಹೊಡೆದು ಭಾರಿ ರಕ್ತ ಗಾಯ ಮಾಡಿದ್ದ ಎಂದರೆ

ಸರಿಯಲ್ಲ. ಚಾಸಾ 13 ಕಿರುಚಾಡಿಕೊಂಡಾಗ ಶಬ್ದ ಕೇಳಿ ಚಾಸಾ 14, 15 ಮತ್ತು 16 ರವರು ಸ್ಥಳಕ್ಕೆ ಬಂದರು ಮತ್ತು ಚಾಸಾ 14 ಆರೋಪಿಯ ಕೈಯಲ್ಲಿದ್ದ ಕಬ್ಬಿಣದ ಗಡಾರಿಯನ್ನು ಕಸಿದುಕೊಂಡು ಮನೆಯ ಪಕ್ಕದಲ್ಲಿ ಬೀಸಾಡಿದ್ದನು ಎಂದರೆ ಸರಿಯಲ್ಲ. ಆಗ ಆರೋಪಿಯು ಮನೆಯಲ್ಲಿದ್ದ ಕೊಡಲಿಯನ್ನು ತೆಗೆದುಕೊಂಡು ಚಾಸಾ 13 ರವರ ತಲೆಗೆ ಕೊಡಲಿ ಕಾವಿನಿಂದ ಹೊಡೆದು ಗಾಯಪಡಿಸಿದ್ದನು ಎಂದರೆ ಸರಿಯಲ್ಲ. ಚಾಸಾ 14 ರಿಂದ 16 ಜಗಳ ಬಿಡಿಸಲು ಬಂದಾಗ ಆರೋಪಿಯು ಸದರಿ ಕೊಡಲಿಯನ್ನು ಅವರಿಗೆ ತೋರಿಸಿ ಹೊಡೆಯುವುದಾಗಿ ಬೆದರಿಕೆ ಹಾಕಿದ್ದ ಎಂದರೆ ಸರಿಯಲ್ಲ. ನಂತರ ಕೊಡಲಿಯೊಂದಿಗೆ ಮನೆಯ ಹೊರಗೆ ಸ್ವಲ್ಪ ದೂರಕ್ಕೆ ಹೋಗಿ ಕೊಡಲಿಯನ್ನು ಬೀಸಾಡಿ ಆರೋಪಿಯು ಪರಾರಿಯಾಗಿದ್ದ ಎಂದರೆ ಸರಿಯಲ್ಲ. ನಂತರ ಗಾಯಾಳು ಸೀತಾ ಬಾಯಿ ಹಾಗೂ ಚಾಸಾ 13 ರವರನ್ನು ಚಾಸಾ 14, 18 ಮತ್ತು 19 ರವರು ಆಟೋದಲ್ಲಿ ಹಾಕಿಕೊಂಡು ಬಿ ಎಂ ಸಿ ಆರ್ ಸಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ವೈದ್ಯರು ನನ್ನ ಅತ್ತಿಗೆಯನ್ನು ಪರೀಕ್ಷಿಸಿ ಮೃತ ಪಟ್ಟಿರುತ್ತಾಳೆ ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ. ಪೋಲೀಸರು ಅವಳ ಶವ ಪಂಚನಾಮೆ ಮಾಡುವ ಸಮಯದಲ್ಲಿ ನಾನು ಹಾಜರು ಇದ್ದು ಮೇಲೆ ಹೇಳಿದ ಸಂಗತಿಗಳ ಬಗ್ಗೆ ತಿಳಿದುಕೊಂಡು ದಿಃ 4-10-2025 ರಂದು ನನಗೆ ಈಗ ಓದಿ ಹೇಳಿದಂತೆ " ನಾನು ಮೇಲ್ಕಂಡ ವಿಳಾಸದಲ್ಲಿ --- ಹೇಳಿಕೆಯಲ್ಲಿ ನೀಡಿರುತ್ತೇನೆ " ಎಂದು ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ನಿಪಿ-3 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಮತ್ತು ನನಗೆ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿಯು ನನ್ನ ಅಣ್ಣನಾಗಿರುವುದರಿಂದ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಪಾಟೀ ಸವಾಲು ಇಲ್ಲ.</u>**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ</u>**

**<u>ಸತ್ರ ಮೊಕದ್ದಮೆ ಸಂಖ್ಯೆಃ- 1/2026</u>**

**ಪ್ರಾಸಾಃ- 3 ಚಾಸಾಃ- 14**

| | | |
|---|---|---|
| ಸಾಕ್ಷಿಯ ಹೆಸರು | : | ಟೋಪು ನಾಯಕ್ |
| ತಂದೆಯ ಹೆಸರು | : | ಗೋವಿಂದ ನಾಯಕ್ |
| ವಯಸ್ಸು | : | 32 ವರ್ಷ |
| ವೃತ್ತಿ | : | ಶಿಕ್ಷಕರು |
| ವಾಸಸ್ಥಳ | : | ಬೆಳಗಲ್ ತಾಂಡಾ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 10.3.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನನಗೆ ಚಾಸಾ 1, 13, 15 ಮತ್ತು 16 ರವರ ಪರಿಚಯ ಇದೆ. ಆರೋಪಿಯ ಪರಿಚಯ ಇದೆ. ಮೃತ ಸೀತಾಬಾಯಿಯ ಪರಿಚಯ ಇದೆ. ಸೀತಾಬಾಯಿ ಹೇಗೆ ಮತ್ತು ಯಾವ ಕಾರಣದಿಂದಾಗಿ ಮರಣ ಹೊಂದಿದ್ದಳು ಎಂದು ನನಗೆ ಗೊತ್ತಿಲ್ಲ. ನಾನು ಗಲಾಟೆ ಶಬ್ದ ಕೇಳಿ ಸೀತಾ ಬಾಯಿ ಮನೆಯ ಹತ್ತಿರ ಹೋದಾಗ ಸೀತಾ ಬಾಯಿ ಹಾಗೂ ಚಾಸಾ 13 ಗಾಯಗೊಂಡು ಬಿದ್ದಿದ್ದರು. ನಾನು, ಚಾಸಾ 18 ಮತ್ತು 19 ರವರು ಗಾಯಗೊಂಡಿದ್ದ ಸೀತಾ ಬಾಯಿ ಹಾಗೂ ಚಾಸಾ 13 ರವರನ್ನು ಆಸ್ಪತ್ರೆಗೆ ಆಟೋದಲ್ಲಿ ಕರೆದುಕೊಂಡು ಹೋಗಿದ್ದೆವು. ಆಸ್ಪತ್ರೆಯಲ್ಲಿ ಸೀತಾ ಬಾಯಿ ಮರಣ ಹೊಂದಿದ್ದಳು. ಇಷ್ಟನ್ನು ಹೊರತು ಪಡಿಸಿ ನನಗೆ ಪ್ರಕರಣದ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ. ನ್ಯಾಯಾಲಯ ಮುಂದೆ ಇರುವ ಕಬ್ಬಿಣದ ಗಡಾರಿ ಮತ್ತು ಕೊಡಲಿಯನ್ನು ಈ ಮೊದಲು ನೋಡಿಲ್ಲ. ಅದರಿಂದ ಆರೋಪಿಯು ಮೃತಳಿಗೆ ಮತ್ತು ಚಾಸಾ 13 ರವರಿಗೆ ಹಲ್ಲೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮತ್ತು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದರಿಂದ ಅದನ್ನು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರಿಗೆ ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ಅಭಿಯೋಜಕರವರಿಂದಃ**

ಆರೋಪಿಯು ತನ್ನ ಹೆಂಡತಿಗೆ ಅವಳ ತವರು ಮನೆಯಿಂದ ಒಂದು ಎಕರೆ ಜಮೀನನ್ನು ತನ್ನ ಹೆಸರಿಗೆ ಮಾಡಿಸುವಂತೆ ಒತ್ತಾಯ ಮಾಡುತ್ತಿದ್ದ ಎಂದರೆ ಸರಿಯಲ್ಲ. ಮೃತಳು ತವರು ಮನೆಯಿಂದ ಯಾವುದೇ ಆಸ್ತಿ ತಂದು ಕೊಡದೇ ಇದ್ದುದರಿಂದ ಆರೋಪಿಯು ಅವಳ ತಮ್ಮಂದಿರ ಮೇಲೆ ಸಿಟ್ಟು ಇಟ್ಟುಕೊಂಡಿದ್ದ ಮತ್ತು ಅದೇ ಸಿಟ್ಟಿನಿಂದ ಅವಳನ್ನು ತವರು ಮನೆಗೆ ಹೋಗಬೇಡ ಎಂದು ಹೇಳುತ್ತಿದ್ದ ಎಂದರೆ ಸರಿಯಲ್ಲ. ಮೃತ ಸೀತಾ ಬಾಯಿಯ ತಮ್ಮ ರಾಮು ನಾಯಕ್ ಅನಾರೋಗ್ಯದಿಂದ ಮೃತ ಪಟ್ಟಿದ್ದರಿಂದ ಅವಳು ಆತನನ್ನು ನೋಡಲು ಹೋಗುವ ಸಮಯದಲ್ಲಿ ಆರೋಪಿಯು ಅವಳಿಗೆ ಕಾರ್ಯಕ್ರಮಕ್ಕೆ ಹೋಗಬೇಡ ಎಂದು ಹೇಳಿದ್ದರೂ ಸಹ  ಅವಳು ತನ್ನ ತಮ್ಮನ ಅಂತ್ಯ ಸಂಸ್ಕಾರಕ್ಕೆ ಚಾಸಾ 1 ಮತ್ತು 13 ರವರ  ಜೊತೆ ಹೋಗಿದ್ದಳು ಎಂದರೆ ಸರಿಯಲ್ಲ. ಅವಳು ಮನೆಗೆ ಬಂದಾಗ ಆರೋಪಿಯು ಅವಳಿಗೆ ಮತ್ತು ಚಾಸಾ 1 ಮತ್ತು 13 ರವರಿಗೆ ನಾನು ಹೋಗಬೇಡ ಎಂದರೂ ಸಹ ನೀವು ರಾಮಾ ನಾಯಕ್ ನ ಮರಣ  ಕಾರ್ಯಕ್ರಮಕ್ಕೆ ಏಕೆ ಹೋಗಿದ್ದೀರಿ ಎಂದು ಮೃತಳ ಜೊತೆ  ಜಗಳ ಆಡಿದ್ದ ಎಂದರೆ ಸರಿಯಲ್ಲ. ದಿಃ 2-5-2025 ರಂದು ರಾಮಾ ನಾಯಕ್ ನ  11 ದಿವಸದ ಕಾರ್ಯಕ್ರಮಕ್ಕೆ ಮೃತ ಸೀತಾಬಾಯಿ ತನ್ನ ಮಕ್ಕಳನ್ನು ಕರೆದುಕೊಂಡು ಹೋಗಿದ್ದಳು ಎಂದರೆ ಸರಿಯಲ್ಲ. ಆದ್ದರಿಂದ ಆರೋಪಿಗೆ ಸಿಟ್ಟು ಬಂದು ಅವಳಿಗೆ  ನೀನು ನನಗೆ ಮರ್ಯಾದೆ ಕೊಡದೇ ನನ್ನ ಮಾತಿಗೆ ಬೆಲೆ ಕೊಡದೇ ಆ ಕಾರ್ಯಕ್ರಮಕ್ಕೆ ಹೋಗಿ ಬಂದಿದ್ದಿ ಎಂದು ಜಗಳ ವಾಡಿದ್ದ ಎಂದರೆ ಸರಿಯಲ್ಲ. ಮೃತಳು ಆಗ ಎದುರು ಮಾತನಾಡಿದ್ದರಿಂದ ಆಕೆಯ ಮೇಲೆ ಆರೋಪಿಯು ದ್ವೇಷ ಇಟ್ಟುಕೊಂಡಿದ್ದ ಎಂದರೆ ಸರಿಯಲ್ಲ. ಅದೇ ದ್ವೇಷದಿಂದ ಆರೋಪಿ ದಿಃ 3-10-2025 ರಂದು ರಾತ್ರಿ 8-30 ಗಂಟೆಗೆ ಮೃತಳೊಂದಿಗೆ ಜಗಳ ಆಡಿದ್ದ ಎಂದರೆ ಸರಿಯಲ್ಲ. ಆಗ ಚಾಸಾ 13 ಮಧ್ಯದಲ್ಲಿ ಬಾಯಿ ಹಾಕಿದ್ದರಿಂದ ಆರೋಪಿಯು ಸಿಟ್ಟಿನಿಂದ ನ್ಯಾಯಲಯದ ಮುಂದೆ ನೋಡುತ್ತಿರುವ ಕಬ್ಬಿಣದ ಗಡಾರಿಯಿಂದ ಚಾಸಾ 13 ರವರಿಗೆ ಹೊಡೆಯಲು ಹೋಗಿದ್ದ ಎಂದರೆ ಸರಿಯಲ್ಲ. ಆಗ ಮೃತಳು ಬಿಡಿಸಲು ಅಡ್ಡ ಬಂದಾಗ ಆರೋಪಿಯು ಅವಳನ್ನು ಕೊಲೆ ಮಾಡುವ ಉದ್ದೇಶದಿಂದ ಸದರಿ ಕಬ್ಬಿಣದ ಗಡಾರಿಯಿಂದ ಅವಳ ತಲೆಯ ಮೇಲೆ ಹೊಡೆದು ಭಾರಿ ರಕ್ತ ಗಾಯ ಮಾಡಿದ್ದ ಎಂದರೆ ಸರಿಯಲ್ಲ. ಚಾಸಾ 13  ಕಿರುಚಾಡಿಕೊಂಡಾಗ ಶಬ್ದ ಕೇಳಿ

ನಾನು, ಚಾಸಾ 15 ಮತ್ತು 16 ರವರು ಸ್ಥಳಕ್ಕೆ ಬಂದೆವು ಮತ್ತು ನಾನು ಆರೋಪಿಯ ಕೈಯಲ್ಲಿದ್ದ ಕಬ್ಬಿಣದ ಗಡಾರಿಯನ್ನು ಕಸಿದುಕೊಂಡು ಮನೆಯ ಪಕ್ಕದಲ್ಲಿ ಬೀಸಾಡಿದ್ದೆ ಎಂದರೆ ಸರಿಯಲ್ಲ. ಆಗ ಆರೋಪಿಯು ಮನೆಯಲ್ಲಿದ್ದ ಕೊಡಲಿಯನ್ನು ತೆಗೆದುಕೊಂಡು ಚಾಸಾ 13 ರವರ ತಲೆಗೆ ಕೊಡಲಿ ಕಾವಿನಿಂದ ಹೊಡೆದು ಗಾಯಪಡಿಸಿದ್ದನು ಎಂದರೆ ಸರಿಯಲ್ಲ. ನಾನು, ಚಾಸಾ 15 ಮತ್ತು 16 ಜಗಳ ಬಿಡಿಸಲು ಬಂದಾಗ ಆರೋಪಿಯು ಸದರಿ ಕೊಡಲಿಯನ್ನು ಅವರಿಗೆ ತೋರಿಸಿ ಹೊಡೆಯುವುದಾಗಿ ಬೆದರಿಕೆ ಹಾಕಿದ್ದ ಎಂದರೆ ಸರಿಯಲ್ಲ. ನಂತರ ಕೊಡಲಿಯೊಂದಿಗೆ ಮನೆಯ ಹೊರಗೆ ಸ್ವಲ್ಪ ದೂರಕ್ಕೆ ಹೋಗಿ ಕೊಡಲಿಯನ್ನು ಬೀಸಾಡಿ ಆರೋಪಿಯು ಪರಾರಿಯಾಗಿದ್ದ ಎಂದರೆ ಸರಿಯಲ್ಲ. ನಂತರ ಗಾಯಾಳು ಸೀತಾ ಬಾಯಿ ಹಾಗೂ ಚಾಸಾ 13 ರವರನ್ನು ನಾನು, ಚಾಸಾ 18 ಮತ್ತು 19 ರವರು ಆಟೋದಲ್ಲಿ ಹಾಕಿಕೊಂಡು ಬಿ ಎಂ ಸಿ ಆರ್ ಸಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದೆವು ಎಂದರೆ ಸರಿಯಲ್ಲ. ವೈದ್ಯರು ಸೀತಾ ಬಾಯಿಯನ್ನು ಪರೀಕ್ಷಿಸಿ ಮೃತ ಪಟ್ಟಿರುತ್ತಾಳೆ ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ.

ಈ ಎಲ್ಲಾ ಸಂಗತಿಗಳ ಬಗ್ಗೆ ನಾನು ಪೋಲೀಸರ ಮುಂದೆ ನನಗೆ ಈಗ ಓದಿ ಹೇಳಿದಂತೆ ದಿಃ 4-10-2025 ರಂದು " ನಾನು ಮೇಲ್ಕಂಡ ವಿಳಾಸದಲ್ಲಿ --- ಹೇಳಿಕೆಯನ್ನು ನೀಡಿರುತ್ತೇನೆ " ಎಂದು ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು. ನಿಪಿ-4 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಮತ್ತು ನನಗೆ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿಯೊಂದಿಗೆ ರಾಜಿ ಮಾಡಿಕೊಂಡು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಪಾಟೀ ಸವಾಲು ಇಲ್ಲ.</u>**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆಃ- 1/2026**

**ಪ್ರಾಸಾಃ- 4 ಚಾಸಾಃ- 15**

| | | |
|---|---|---|
| ಸಾಕ್ಷಿಯ ಹೆಸರು | : | ಸ್ವಾಮಿ ನಾಯಕ್ |
| ತಂದೆಯ ಹೆಸರು | : | ಪರಶು ನಾಯಕ್ |
| ವಯಸ್ಸು | : | 27 ವರ್ಷ |
| ವೃತ್ತಿ | : | ಅಂಗಡಿ ಕೆಲಸ |
| ವಾಸಸ್ಥಳ | : | ಬೆಳಗಲ್ ತಾಂಡಾ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 10.3.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ಆರೋಪಿ ನನ್ನ ಅಣ್ಣನಾಗಬೆಕು. ಮೃತ ಸೀತಾಬಾಯಿ ನನ್ನ ಅತ್ತಿಗೆಯಾಬೇಕು. ಚಾಸಾ 1 ಮತ್ತು 13 ರವರು ನನ್ನ ಅಣ್ಣನ ಮಕ್ಕಳಾಗಬೇಕು. ನನಗೆ ಚಾಸಾ 12, 14, 16 ರಿಂದ 18 ರವರ ಪರಿಚಯ ಇದೆ. ಈಗ 5 ತಿಂಗಳ ಹಿಂದೆ ನನ್ನ ಅತ್ತಿಗೆ ಮೃತರಾಗಿದ್ದರು. ನನ್ನ ಅತ್ತಿಗೆ ಹೇಗೆ ಮತ್ತು ಯಾವ ಕಾರಣದಿಂದಾಗಿ ಮರಣ ಹೊಂದಿದ್ದಳು ಎಂದು ನನಗೆ ಗೊತ್ತಿಲ್ಲ. ನನ್ನ ಅಣ್ಣ ನನ್ನ ಅತ್ತಿಗೆಗೆ ಹಾರೆಯಿಂದ ಹಲ್ಲೆ ಮಾಡಿ ಕೊಲೆ ಮಾಡಿಲ್ಲ. ನನ್ನ ಅಣ್ಣ ಚಾಸಾ 13 ರವರಿಗೆ ಹಾರೆ ಮತ್ತು ಕೊಡಲಿಯಿಂದ ಹೊಡೆದು ಗಾಯಗೊಳಿಸಿಲ್ಲ. ಈ ಬಗ್ಗೆ ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮತ್ತು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದರಿಂದ ಅದನ್ನು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರಿಗೆ ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ಅಭಿಯೋಜಕರವರಿಂದಃ**

ಆರೋಪಿಯು ತನ್ನ ಹೆಂಡತಿಗೆ ಅವಳ ತವರು ಮನೆಯಿಂದ ಒಂದು ಎಕರೆ ಜಮೀನನ್ನು ತನ್ನ ಹೆಸರಿಗೆ ಮಾಡಿಸುವಂತೆ ಒತ್ತಾಯ ಮಾಡುತ್ತಿದ್ದ ಎಂದರೆ ಸರಿಯಲ್ಲ. ನನ್ನ ಅತ್ತಿಗೆ ತವರು ಮನೆಯಿಂದ ಯಾವುದೇ ಆಸ್ತಿ ತಂದು ಕೊಡದೇ ಇದ್ದುದರಿಂದ ಆರೋಪಿಯು ಅವಳ ತಮ್ಮಂದಿರ ಮೇಲೆ ಸಿಟ್ಟು ಇಟ್ಟುಕೊಂಡಿದ್ದ ಮತ್ತು ಅದೇ ಸಿಟ್ಟಿನಿಂದ ಅವಳನ್ನು ತವರು ಮನೆಗೆ ಹೋಗಬೇಡ ಎಂದು ಹೇಳುತ್ತಿದ್ದ ಎಂದರೆ ಸರಿಯಲ್ಲ. ನನ್ನ ಅತ್ತಿಗೆಯ ತಮ್ಮ ರಾಮು ನಾಯಕ್ ಅನಾರೋಗ್ಯದಿಂದ ಮೃತ ಪಟ್ಟಿದ್ದರಿಂದ ನನ್ನ ಅತ್ತಿಗೆ ಆತನನ್ನು ನೋಡಲು ಹೋಗುವ ಸಮಯದಲ್ಲಿ ಆರೋಪಿಯು ಅವಳಿಗೆ ಕಾರ್ಯಕ್ರಮಕ್ಕೆ ಹೋಗಬೇಡ ಎಂದು ಹೇಳಿದ್ದರೂ ಸಹ ಅಳು ತನ್ನ ತಮ್ಮನ ಅಂತ್ಯ ಸಂಸ್ಕಾರಕ್ಕೆ ಚಾಸಾ 1 ಮತ್ತು 13 ರವರ ಜೊತೆ ಹೋಗಿದ್ದಳು ಎಂದರೆ ಸರಿಯಲ್ಲ. ನನ್ನ ಅತ್ತಿಗೆ ಮನೆಗೆ ಬಂದಾಗ ಆರೋಪಿಯು ಅವಳಿಗೆ ಮತ್ತು ಚಾಸಾ 1 ಮತ್ತು 13 ರವರಿಗೆ ನಾನು ಹೋಗಬೇಡ ಎಂದರೂ ಸಹ ನೀವು ರಾಮಾ ನಾಯಕ್ ನ ಮರಣ ಕಾರ್ಯಕ್ರಮಕ್ಕೆ ಏಕೆ ಹೋಗಿದ್ದೀರಿ ಎಂದು ನನ್ನ ಅತ್ತಿಗೆ ಜೊತೆ ಜಗಳ ಆಡಿದ್ದ ಎಂದರೆ ಸರಿಯಲ್ಲ. ದಿಃ 2-5-2025 ರಂದು ರಾಮಾ ನಾಯಕ್‌ನ 11 ದಿವಸದ ಕಾರ್ಯಕ್ರಮಕ್ಕೆ ನನ್ನ ಅತ್ತಿಗೆ ತನ್ನ ಮಕ್ಕಳನ್ನು ಕರೆದುಕೊಂಡು ಹೋಗಿದ್ದಳು ಎಂದರೆ ಸರಿಯಲ್ಲ. ಆದ್ದರಿಂದ ಆರೋಪಿಗೆ ಸಿಟ್ಟು ಬಂದು ಅವಳಿಗೆ ನೀನು ನನಗೆ ಮರ್ಯಾದೆ ಕೊಡದೇ ನನ್ನ ಮಾತಿಗೆ ಬೆಲೆ ಕೊಡದೇ ಆ ಕಾರ್ಯಕ್ರಮಕ್ಕೆ ಹೋಗಿ ಬಂದಿದ್ದಿ ಎಂದು ಜಗಳ ಮಾಡಿದ್ದ ಎಂದರೆ ಸರಿಯಲ್ಲ. ನನ್ನ ಅತ್ತಿಗೆ ಆಗ ಎದುರು ಮಾತನಾಡಿದ್ದರಿಂದ ಆಕೆಯ ಮೇಲೆ ನನ್ನ ಅಣ್ಣ ದ್ವೇಷ ಇಟ್ಟುಕೊಂಡಿದ್ದ ಎಂದರೆ ಸರಿಯಲ್ಲ. ಅದೇ ದ್ವೇಷದಿಂದ ಆರೋಪಿ ದಿಃ 3-10-2025 ರಂದು ರಾತ್ರಿ 8-30 ಗಂಟೆಗೆ ನನ್ನ ಅತ್ತಿಗೆಯೊಂದಿಗೆ ಜಗಳ ಆಡಿದ್ದ ಎಂದರೆ ಸರಿಯಲ್ಲ. ಆಗ ಚಾಸಾ 13 ಮಧ್ಯದಲ್ಲಿ ಬಾಯಿ ಹಾಕಿದ್ದರಿಂದ ಆರೋಪಿಯು ಸಿಟ್ಟಿನಿಂದ ನ್ಯಾಯಲಯದ ಮುಂದೆ ನೋಡುತ್ತಿರುವ ಕಬ್ಬಿಣದ ಗಡಾರಿಯಿಂದ ಚಾಸಾ 13 ರವರಿಗೆ ಹೊಡೆಯಲು ಹೋಗಿದ್ದ ಎಂದರೆ ಸರಿಯಲ್ಲ. ಆಗ ನನ್ನ ಅತ್ತಿಗೆ ಬಿಡಿಸಲು ಅಡ್ಡ ಬಂದಾಗ ಆರೋಪಿಯು ನನ್ನ ಅತ್ತಿಗೆಯನ್ನು ಕೊಲೆ ಮಾಡುವ ಉದ್ದೇಶದಿಂದ ಸದರಿ ಕಬ್ಬಿಣದ ಗಡಾರಿಯಿಂದ ನನ್ನ ಅತ್ತಿಗೆಯ ತಲೆಯ ಮೇಲೆ ಹೊಡೆದು ಭಾರಿ ರಕ್ತ ಗಾಯ ಮಾಡಿದ್ದ ಎಂದರೆ

ಸರಿಯಲ್ಲ. ಚಾಸಾ 13 ಕಿರುಚಾಡಿಕೊಂಡಾಗ ಶಬ್ದ ಕೇಳಿ ನಾನು, ಚಾಸಾ 14 ಮತ್ತು 16 ರವರು ಸ್ಥಳಕ್ಕೆ ಬಂದರು ಮತ್ತು ಚಾಸಾ 14 ಆರೋಪಿಯ ಕೈಯಲ್ಲಿದ್ದ ಕಬ್ಬಿಣದ ಗಡಾರಿಯನ್ನು ಕಸಿದುಕೊಂಡು ಮನೆಯ ಪಕ್ಕದಲ್ಲಿ ಬೀಸಾಡಿದ್ದನು ಎಂದರೆ ಸರಿಯಲ್ಲ. ಆಗ ಆರೋಪಿಯು ಮನೆಯಲ್ಲಿದ್ದ ಕೊಡಲಿಯನ್ನು ತೆಗೆದುಕೊಂಡು ಚಾಸಾ 13 ರವರ ತಲೆಗೆ ಕೊಡಲಿ ಕಾವಿನಿಂದ ಹೊಡೆದು ಗಾಯಪಡಿಸಿದ್ದನು ಎಂದರೆ ಸರಿಯಲ್ಲ. ನಾನು, ಚಾಸಾ 14 ಮತ್ತು 15 ಜಗಳ ಬಿಡಿಸಲು ಬಂದಾಗ ಆರೋಪಿಯು ಸದರಿ ಕೊಡಲಿಯನ್ನು ಅವರಿಗೆ ತೋರಿಸಿ ಹೊಡೆಯುವುದಾಗಿ ಬೆದರಿಕೆ ಹಾಕಿದ್ದ ಎಂದರೆ ಸರಿಯಲ್ಲ. ನಂತರ ಕೊಡಲಿಯೊಂದಿಗೆ ಮನೆಯ ಹೊರಗೆ ಸ್ವಲ್ಪ ದೂರಕ್ಕೆ ಹೋಗಿ ಕೊಡಲಿಯನ್ನು ಬೀಸಾಡಿ ಆರೋಪಿಯು ಪರಾರಿಯಾಗಿದ್ದ ಎಂದರೆ ಸರಿಯಲ್ಲ. ನಂತರ ಗಾಯಾಳು ಸೀತಾ ಬಾಯಿ ಹಾಗೂ ಚಾಸಾ 13 ರವರನ್ನು ಚಾಸಾ 14, 18 ಮತ್ತು 19 ರವರು ಆಟೋದಲ್ಲಿ ಹಾಕಿಕೊಂಡು ಬಿ ಎಂ ಸಿ ಆರ್ ಸಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ವೈದ್ಯರು ನನ್ನ ಅತ್ತಿಗೆಯನ್ನು ಪರೀಕ್ಷಿಸಿ ಮೃತ ಪಟ್ಟಿರುತ್ತಾಳೆ ಎಂದು ತಿಳಿಸಿದ್ದರು ಎಂದರೆ ಸರಿಯಲ್ಲ.

ಈ ಎಲ್ಲಾ ಸಂಗತಿಗಳ ಬಗ್ಗೆ ದಿಃ 4-10-2025 ರಂದು ನನಗೆ ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ " ನಾನು ಮೇಲ್ಕಂಡ ವಿಳಾಸದಲ್ಲಿ --- ಹೇಳಿಕೆಯನ್ನು ನೀಡಿರುತ್ತೇನೆ " ಎಂದು ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು. ನಿಪಿ-5 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಮತ್ತು ನನಗೆ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿಯು ನನ್ನ ಅಣ್ಣನಾಗಿರುವುದರಿಂದ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಪಾಟೀ ಸವಾಲು ಇಲ್ಲ.</u>**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೆ. ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**